

# ಮಳೆಯಲಿ, ಮೇಕಪ್ ಜೊತೆಯಲಿ

**ಮಳೆಗಾಲದಲ್ಲಿ ತೇವಾಂಶ ಹೆಚ್ಚಿರುವುದರಿಂದ ಅಳಿಸಿ ಹೋಗದೇ ಇರುವಂಥ ಮೇಕಪ್ ಅಗತ್ಯ. ಸೌಂದರ್ಯಪ್ರಿಯರ ಅಭಿಲಾಷೆ ಈಡೇರಿಸಲೆಂದೇ ಇದೀಗ ಹೊಸ ಮಾದರಿಯ ವಾಟರ್‌ಪ್ರೂಫ್ ಮೇಕಪ್ ಬಂದಿದೆ.**

**■ ಶಿವಲೀಲಾ ಸೊಪ್ಪಿಮಠ**

ಮಳೆ ಇರಲಿ, ಚಳಿ ಇರಲಿ, ಸುಡು ಬೇಸಿಗೆಯೇ ಇರಲಿ, ಸೌಂದರ್ಯಪ್ರಿಯ ಮಹಿಳೆಯರಿಗೆ ಮೇಕಪ್ ಇಲ್ಲದೆ ಬದುಕೇ ಇಲ್ಲ ಎನ್ನುವಷ್ಟು ಹಾಸುಹೊಕ್ಕಾಗಿದೆ ಈ ಪ್ರಸಾಧನ ಸಾಧನ. ಮಳೆಗಾಲದಲ್ಲೂ ಸಮಾರಂಭಗಳಿಗೆ ತೆರಳುವ ಮಹಿಳೆಯರಿಗೆ, ನಿತ್ಯ ಕಚೇರಿಗಳಿಗೆ ಹೋಗುವ ಹೆಂಗಳೆಯರಿಗೆ, ಮಾರುಕಟ್ಟೆಗೆ ಭೇಟಿ ನೀಡುವ ಗೃಹಿಣಿಯರಿಗೆ, ಶಾಪಿಂಗ್ ಹೋಗುವ ಹುಡುಗಿಯರಿಗೆ ಅಥವಾ ಮಳೆಗಾಲಕ್ಕಾಗಿಯೇ ಕಾದು ಪ್ರವಾಸ ಹೊರಡುವವರಿಗೆ ಮಳೆಗಾಲದಲ್ಲಿ ಮೇಕಪ್ ಕಾಪಾಡಿಕೊಳ್ಳುವುದು ಪಡಿಪಾಟಲಿನ ಕೆಲಸವೇ ಸರಿ.

ಮೇಕಪ್ ಮಾಡಿಕೊಳ್ಳುವಾಗ ಮಳೆಗಾಲಕ್ಕೆ ಸೂಕ್ತವಾದ ಸಾಮಗ್ರಿಗಳನ್ನೇ ಆಯ್ಕೆ ಮಾಡಬೇಕಾಗುತ್ತದೆ. ಮಸ್ಕರಾ, ಐ ಲೈನರ್, ಫೌಂಡೇಷನ್ ಕ್ರೀಂ, ಲಿಪ್‌ಸ್ಟಿಕ್... ಹೀಗೆ ಯಾವುದೇ ಇರಲಿ. ವಾಟರ್‌ಪ್ರೂಫ್ ಆಗಿರುವಂಥವುಗಳನ್ನೇ ಬಳಸಬೇಕು.

### ವಾಟರ್ ಪ್ರೂಫ್ ಏಕೆ ಅವಶ್ಯ?

ಮಳೆಗಾಲದಲ್ಲಿ ವಾತಾವರಣದಲ್ಲಿ ತೇವಾಂಶ, ತೇವಯುಕ್ತ ಗಾಳಿ ಇರುತ್ತದೆ, ಇದರಿಂದ ತ್ವಚೆಗೆ ಹಾನಿಯಾಗಬಹುದು. ಇದಕ್ಕಾಗಿ ಚರ್ಮಕ್ಕೆ ರಕ್ಷಣೆ ಅಗತ್ಯ. ಮುಖಕ್ಕೆ, ಕೈಕಾಲುಗಳಿಗೆ ಹಚ್ಚಿದ ಮೇಕಪ್ ಮಾಸಬಾರದು. ವಾಟರ್‌ಪ್ರೂಫ್ ಮೇಕಪ್‌ನಿಂದ ಮುಖಕ್ಕೆ ಹಚ್ಚಿದ ಕ್ರೀಮ್, ಪೌಡರ್ ಅಳಿಸಲು ಸಾಧ್ಯವಿಲ್ಲ. ತುಟಿಗೆ ಹಚ್ಚಿದ ಲಿಪ್‌ಸ್ಟಿಕ್, ಕಣ್ಣುಗಳ ರೆಪ್ಪೆಗೆ ಹಚ್ಚಿದ ಮಸ್ಕರಾ, ಐಲೈನರ್ ಅಂದಗೆಡಲು ಸಾಧ್ಯವೇ ಇಲ್ಲ. ಇದಕ್ಕಾಗಿಯೇ ವಾಟರ್‌ಪ್ರೂಫ್ ಮೇಕಪ್ ಇತ್ತೀಚೆಗೆ ಹೆಚ್ಚು ಜನಪ್ರಿಯವಾಗುತ್ತಿದೆ.

ಬಿರು ಬಿಸಿಲಿನ ನಂತರ ತಣ್ಣನೆಯ ತಂಗಾಳಿಯನ್ನು ತೀಡುತ್ತಾ ಮಳೆಗಾಲ ಪ್ರಾರಂಭವಾಗುತ್ತದೆ. ಬದಲಾಗುವ ಈ ಹವಾಮಾನ ತ್ವಚೆಯ ಮೇಲೂ ಪರಿಣಾಮ ಬೀರುತ್ತದೆ. ಮಳೆಗಾಲದಲ್ಲಿ ಮುಖ ಮತ್ತು ತಲೆ ಕೂದಲುಗಳು ಅಂಟು ಅಂಟಾಗಿರುತ್ತವೆ. ಇದರಿಂದ ಮುಖದಲ್ಲಿ ಮೊಡವೆಗಳು ಮತ್ತು ತಲೆಯಲ್ಲಿ ಹೊಟ್ಟು ಉಂಟಾಗುತ್ತದೆ. ಇವೆಲ್ಲವುಗಳ ನಿವಾರಣೆಗೆ ಮತ್ತು ತ್ವಚೆ ಆರೋಗ್ಯಪೂರ್ಣವಾಗಿರಲು ಕೆಲವೊಂದು ಕ್ರಮಗಳನ್ನು ಅನುಸರಿಸಬೇಕು.

ಮಳೆಗಾಲದಲ್ಲಿ ವಾತಾವರಣ ಸದಾ ತೇವಾಂಶದಿಂದ ಕೂಡಿರುತ್ತದೆ. ಈ